Finalisation of Cadre and Recruitment Rules of Graduate Teachers.

*Q.—768. Smt. RATNAMMA MADHAVA RAO (Shimoga).—

Will the Government be pleased to state :—

(*a*) whether the Graduate teachers cadre and Recruitment Rules have been finalised ;

(*b*) whether the B.Sc. (Hons.) degree has been included as a qualification for the appointment of Demonstrators and Lecturers in the Department of Collegiate Education ;

(*c*) if not, why not ;

(*d*) whether it is a fact that B.Sc. degree has been fixed as a minimum qualification for the above post ?

*A.—Sri S. R. KANTHI (Minister for Education).—

(*a*) No. They are being finalised in consultation with the Public service Commission.

(*b*), (*c*) and (*d*). The minimum qualification prescribed for appointment of Lecturers is M.A. or M.Sc., II Class. For the posts of Demonstrators, a Second Class B.A. or B.Sc., in the Optional group has been prescribed as a minimum qualification, M. A. and M. Sc. being preferred. A B.Sc. (Hons.) candidate will also be eligible.

ಶ್ರೀಮತಿ ರತ್ನಮ್ಮ ಮಾಧವರಾವ್.—ಲೋಕಸೇವಾ ಆಯೋಗದವರೊಡನೆ ಸಮಾಲೋಚನೆ ಮಾಡುತ್ತೇವೆ ಮತ್ತು ಅಂತಿಮಗೊಳಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಇದು ಯಾವಾಗ ಅಂತಿಮ ವಾಗುತ್ತದೆ ಮತ್ತು ಅವರಿಗೆ ಯಾವಾಗ ಕೆಲಸಗಳು ಸಿಗುತ್ತವೆ ?

†ಶ್ರೀ ಎಸ್. ಆರ್. ಕಂಠಿ.—ಸಿ. ಅಂಡ್. ಆರ್. ರೂಲ್ಸುಈಗ ಪಬ್ಲಿಕ್ ಸರ್ವಿಸ್ಸು ಕಮಿಷನ್ ಕಡೆಗೆ ಹೋಗಿದೆ. ಅದನ್ನೂಕೂಡ ಮುಗಿಸಬೇಕೆಂದು ನಮ್ಮ ಸೆಕ್ರಟರಿ ಗಳು ಅಲ್ಲಿಗೆ ಹೋಗಿ ತೀವ್ರವಾಗಿ ಮುಗಿಸಿ ತರುವುದರಲ್ಲಿದ್ದಾರೆ. ಆದಷ್ಟು ತೀವ್ರವಾಗಿ ಬರುತ್ತದೆ ಎಂದು ಕಾಣುತ್ತದೆ.

Sri S. M. KRISHNA.—Since how long this question is pending before the Education Ministry ?

ಶ್ರೀ ಎಸ್. ಆರ್. ಕಂಠಿ.—ಎಷ್ಟು ದಿವಸಗಳು ಎಂದು ಹೇಳುವುದಕ್ಕಾಗುವುದಿಲ್ಲ. ಅಂತೂ ಸ್ವಲ್ಪ ದಿವಸಗಳಿಂದ ಇದೆ.

Sri J. P. SERWESH.—May I know whether this question applies to the Hindi Graduates ?

Sri S. R. KANTHI.—I want notice, Sir.

Charging of Water Rate on Dry-*cum*-Wet Lands.

*Q.—418. Sri C. M. REVANASIDDIAH (Siruguppa).—

Will the Government be pleased to state :—

(*a*) whether they are charging water-rate on dry-*cum*-wet lands which have not utilised the water from the Tungabhadra project, and if so, since how long ;

(*b*) Whether they have taken any steps to supply water to dry-*cum*-wet lands in the said area and if so, what are they ?

A.—Sri S. NIJALINGAPPA (Chief Minister).—

(*a*) Yes. Since 1955-56.

(*b*) Water is supplied to all the localised ayacut including the dry-*cum*-wet lands. In order to see that even the lands at the tail-end receive water, steps are being taken to prevent unauthorised irrigation in the upper reaches.

Sri G. V. GOWDA.—The surplus water available in Thungabhadra is being made use of unauthorisedly. Can it not be made regular ?

Sri S. NIJALINGAPPA.—Some people are drawing water unauthorisedly. We will do whatever is possible to get it rectified.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ನೀರಿನ ಸರಬರಾಜನ್ನು ಕೇಳಿದವರು ನೀರನ್ನು ತೆಗೆದು ಕೊಂಡಿಲ್ಲ ಡ್ರೈ-ಕಂ-ವೆಟ್ ಎಂದು ವ್ಯವಸಾಯ ಮಾಡುವ ರೈತರಿಗೆ ನ್ಯಾಯವಾಗಿ ಸಿಗಬೇಕಾದಷ್ಟು ನೀರು ಸಿಗುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಸ್. ನಿಜಲಿಂಗಪ್ಪ.—ಅದು ಸರಿಯಿಲ್ಲ. ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರು ಹೇಳುವಂತೆ ಕೊನೆಯಲ್ಲಿರುವವರಿಗೆ ಡ್ರೈ-ಕಂ-ವೆಟ್ ಎಂದು ಸಾಗುವಳಿ ಮಾಡುವವರಿಗೆ ಸ್ವಲ್ಪ ನೀರು ಸಿಗದೆ ತೊಂದರೆಯಾಗಿದೆ ಎಂದು ತಿಳಿದು ಬಂದಿದೆ ಮತ್ತು ಮೊದಲಿಗಿದ್ದವರು ನೀರನ್ನು ಕೊಡದೇ ಹೋದರು ಎಂದು ಅವರಿಗೆ ಶಿಕ್ಷೆ ಮಾಡಲು ಆಜ್ಞೆ ಹೊರಟಿದೆ, ತೊಂದರೆಯನ್ನು ತಪ್ಪಿಸಲು ತಕ್ಕ ಕ್ರಮಗಳನ್ನು ಮಾಡುತ್ತಿದ್ದೇವೆ ಮತ್ತು ಕೆಲಸಗಳೂ ನಡೆಯುತ್ತಿವೆ, ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಈ ಪ್ರಾಜೆಕ್ಟಿನ ಕೆಳಗೆ ಅನ್ ಆಥರೈಸ್ಡ್ ಕಲ್ಟಿವೇಷನ್ ಎಷ್ಟಿದೆ ? ಮತ್ತು ಒಂದು ಕ್ರಾಪ್ ಬೆಳೆಯುವ ಆಯಕಟ್ಟು ಎಷ್ಟಿದೆ ಮತ್ತು ಎರಡು ಕ್ರಾಪ್‌ಗಳು ಆಗುವ ಆಯಕಟ್ಟು ಎಷ್ಟಿದೆ ಎನ್ನುವುದನ್ನು ಸರಕಾರದವರು ತಿಳಿಸುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದನ್ನೆಲ್ಲಾ ಗಮನದಲ್ಲಟ್ಟುಕೊಂಡು ಇಲ್ಲಿ ತೊಂದರೆಮಾಡುತ್ತಿರುವವರಿಗೆ ಶಿಕ್ಷೆ ವಿಧಿಸಬೇಕೆಂದು ಮಾಡಲಾಗುತ್ತಿದೆ ಮತ್ತು ಇಲ್ಲಿ ಕೆಲವು ನೀರನ್ನು ದುರುಪಯೋಗ ಮಾಡುತ್ತಿದ್ದಾರೆ ಎಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಅನ್‌ಆಥರೈಸ್ಡ್ ಕಲ್ಟಿವೇಷನ್ನು ಆಯಕಟ್ಟು ಸುಮಾರು 12,000 ಎಕರೆಗಳಷ್ಟು ಇದೆ. ಡ್ರೈ-ಕಂ-ವೆಟ್ ಒನ್ ಕ್ರಾಪ್ ಮತ್ತು ಸೆಕೆಂಡ್ ಕ್ರಾಪ್ ಬೆಳೆಯುವ ಆಯಕಟ್ಟು ಸುಮಾರು 20,000 ಎಕರೆಗಳಷ್ಟು ಇದೆ. ಆದುದರಿಂದ ಡ್ರೈ-ಕಂ-ವೆಟ್ ಕಲ್ಟಿವೇಟು ಮಾಡುವವರಿಗೆ ಎಷ್ಟು ತೆರಿಗೆ ಹಾಕುತ್ತೀರೋ ಅದರಂತೆ ಅವರಿಗೆ ನೀರು ಕೊಡುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇವೆಲ್ಲಾ ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ಹಾಗೆ ಆಗಬಾರದು. ಯಾರಾದರೂ ನೀರು ಕೊಡುವುದನ್ನು ತಪ್ಪಿಸಿ ತೊಂದರೆ ಮಾಡಿದವರಿಗೆ ಹೆಚ್ಚು ಹಣವನ್ನು ಹಾಕಿ ಅವರಿಗೆ ಶಿಕ್ಷೆ ಮಾಡಬೇಕೆಂದು ಕಂದಾಯದಲ್ಲಿ 20ರಷ್ಟು ಹೆಚ್ಚಾಗಿ ಹಾಕಿ ಅದನ್ನು ದಂಡವಾಗಿ ಕೊಡಬೇಕೆಂದು ಮಾಡಿದ್ದೇವೆ. ಅದನ್ನು ವರ್ಷ್ಕೆ ವರ್ಷ್ಕೆ ಜಾಸ್ತಿ ಮಾಡುತ್ತ ಬರುತ್ತಿದ್ದೇವೆ.

Sri G. V. GOWDA.- Is it not a fact that 40 to 41 T. M. C. of water is being supplied to Andhra in spite of our difficulties for water for irrigation purposes ?

Sri S. NIJALINGAPPA.—Of course we are supplying so much of water to Andhra. The Left Bank canal is not yet regularly put into service. Some people are not making use of water from this Canal, when the water is available there. Everything will be allright after some time.

ಶ್ರೀ ಸಿ. ಎಂ. ರೇವಣಸಿದ ಯ್ಯ.—ಡ್ರೈ-ಕಂ-ವೆಟ್ ವ್ಯವಸಾಯ ಮಾಡುವವರಿಗೆ ಸರಿಯಾಗಿ ನೀರನ್ನು ಕೊಡದೆ ತಪ್ಪಿಸುವವರ ಮೇಲೆ ಶಿಕ್ಷೆ ಕೊಡುತ್ತ, ತೆರಿಗೆ ಹೆಚ್ಚಾಗಿ ಹಾಕಿದರೆ ಅದರಿಂದ ಸರಕಾರಕ್ಕೆ ಬರಬೇಕಾದ ಹಣ ಬಂದುಬಿಡುತ್ತಾಗುತ್ತದೆ. ಹಾಗಿದ್ದರೂ ನೀರನ್ನು ತೆಗೆದುಕೊಳ್ಳದೆ ಇರುವವರ ಮೇಲೆ ಹೆಚ್ಚು ಕಂದಾಯ ಕೊಡಬೇಕೆಂದು ವಸೂಲು ಮಾಡುವುದು ಸರಿಯಲ್ಲವಲ್ಲವೇ ! ಇದರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಸಾಧಾರಣವಾಗಿ ನಮಾರು ಹತ್ತು ವರ್ಷಗಳಿಂದಲೂ ಬರುತ್ತಿದೆ. ಇದರಲ್ಲಿ ಕೆಲವು ಲೋಪದೋಷಗಳಿವೆ. ಇದನ್ನು ಬಗೆಹರಿಸಬೇಕೆಂದು ಇಷ್ಟು ದಿವಸವೂ ಪ್ರಯತ್ನ ಮಾಡುತ್ತ ಬರುತ್ತಿದ್ದೇವೆ. ಇದನ್ನು ಸ್ವಲ್ಪ ದಿವಸದಲ್ಲೇ ಬಗೆ ಹರಿಸುವುದಕ್ಕಾಗುವುದಿಲ್ಲ. ಎರಡು ಮೂರು ಸಲ ನಾನೇ ಅಲ್ಲಿಗೆ ಹೋಗಿ ಅಲ್ಲಿ ಯಾರು ನೀರನ್ನು ದುರುಪಯೋಗ ಮಾಡುತ್ತಿದ್ದಾರೋ ಅವರಿಗೆ ಜಾಸ್ತಿಯಾಗಿ ತೆರಿಗೆ ಹಾಕಬೇಕು ಎಂದೂ ಅವರಿಗೆ ಶಿಕ್ಷೆ ಕೊಡಬೇಕೆಂದೂ ಮಾಡಲಾಗಿದೆ. ಆದಷ್ಟೂ ಯಾರು ನೀರನ್ನು ದುರುಪಯೋಗ ಮಾಡುತ್ತಿದ್ದಾರೆ ಅದನ್ನು ತಪ್ಪಿಸಿ ಇಲ್ಲಿನ ಜನರ ಕಷ್ಟಗಳನ್ನು ಬಗೆಹರಿಸಬೇಕು ಎಂದು ನಾವು ಕೂಡ ಪ್ರಯತ್ನ ಮಾಡುತ್ತಲೇ ಇದ್ದೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ತಾವು ಅನ್ ಆಥರೈಸ್ಡ್ ಕಲ್ಟಿವೇಷನ್ನು ಮಾಡುತ್ತಿದ್ದಾರೆ ಎಂದು ಅವರು ಸೆಕೆಂಡು ಕ್ರಾಪ್ ಬೆಳೆದರೆ ಅವರ ಮೇಲೆ ಸ್ವಲ್ಪ ತೆರಿಗೆ ಹೆಚ್ಚು ಹಾಕಿದರೆ ಆಗ ಸರಕಾರಕ್ಕೆ ಬರಬೇಕಾದ ಹಣ ಬಂದಂತಾಗುತ್ತದೆ. ಹಾಗಿರುವಾಗ ನೀರನ್ನು ತೆಗೆದುಕೊಳ್ಳದೆ ಇರುವವರ ಮೇಲೂ ಡ್ರೈ-ಕಂ-ವೆಟ್‌ನಂತೆ ಕಂದಾಯವನ್ನು ವಸೂಲು ಏಕೆ ಮಾಡುತ್ತಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲ ನೀರು ತೆಗೆದುಕೊಂಡು ಉಪಯೋಗಿಸುತ್ತಿದ್ದಾರೋ ಅವರ ಮೇಲೆ ತೆರಿಗೆ ಹಾಕ ವಸೂಲು ಮಾಡುತ್ತಾರೆ. ಎಲ್ಲ ನೀರು ತೆಗೆದುಕೊಳ್ಳದೇ ಇದ್ದಾರೋ ಅಂತಹವರ ಮೇಲೆ ಕಂದಾಯ ಹಾಕಿ ವಸೂಲು ಮಾಡಬಾರದು ಎಂದು ಅವರಿಗೆ ಹೇಳಲಾಗಿದೆ. ಈ ಪ್ರಶ್ನೆ ಪದೇ ಪದೇ ಇಲ್ಲಿ ಬರುತ್ತಿದೆ. ಇದಕ್ಕೇನಾದರೂ ಪರಿಹಾರವನ್ನು ಮಾಡಬೇಕೆಂದು ಇದ್ದೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಎಷ್ಟೋ ಸಲ ಇದರ ಬಗ್ಗೆ ಸರಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ ಮತ್ತು ಸಾವಿರಗಟ್ಟಲೆ ಮನವಿಗಳನ್ನು ಸರಕಾರಕ್ಕೆ ಕಳುಹಿಸಲಾಗಿದೆ. ಆದರೂ ಇನ್ನೂ ಅವರಿಗೆ ಪರಿಹಾರಗಳನ್ನು ಕೊಟ್ಟಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೂ ಗೊತ್ತಿದೆ. ಯಾರಿಂದಲಾದರೂ ಅವರಿಗೆ ನೀರು ಕೊಡದೆ ಹೆಚ್ಚು ಹಣವನ್ನು ವಸೂಲು ಮಾಡಿದ್ದರೆ ಅವರಿಗೆ ಸರಿಯಾದ ಪರಿಹಾರವನ್ನು ಕೊಡಬೇಕೆಂದು ಮಾಡಲಾಗಿದೆ ಮತ್ತು ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ.

9-30 A.M.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಡ್ರೈ-ಕಂ-ವೆಟ್ ಲ್ಯಾಂಡ್ಸ್‌ನಲ್ಲಿ ಯಾವ ಸೀಜನ್‌ನಲ್ಲಿ ಯಾವ ಬೆಳೆ ಬೆಳೆಯಬೇಕು ಎನ್ನುವುದು ಸರಕಾರದ ಮಟ್ಟದಲ್ಲಿ ನಿರ್ಧಾರವಾಗಿಲ್ಲ ಎಂಬುದು ಗೊತ್ತಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಡ್ರೈ-ಕಂ-ವೆಟ್ ಲ್ಯಾಂಡ್ಸ್‌ನಲ್ಲಿ ಪರ್ಮನೆಂಟ್ ಆಗಿ ಯಾವ ಕೆಲಸ ನಡೆದಿಲ್ಲ, ರೈತರು ಸಹ ಸಾಕಷ್ಟು ಆಸ್ಥೆ ವಹಿಸಿ ಕೆಲಸ ಮಾಡಿರುವುದಿಲ್ಲ. ಆದರೆ ಈಗ ಪ್ರಯತ್ನ ಮಾಡುತ್ತಿದ್ದಾರೆ. ಕೆಲವು ಕಾಲದಲ್ಲಿ ಎಲ್ಲವೂ ಸರಿಹೋಗಬಹುದೆಂದು ಅನಿಸುತ್ತದೆ.

Mr. SPEAKER.—Question hour is over.

QUESTION FOR ANSWER ON THE DAY

(but not taken up)

Lift Irrigation Scheme at Kalgi.

*Q.—790. Sri S. RUDRAPPA (Kalgi).—

Will the Government be pleased to state :—

whether it is a fact that survey and estimate has been made in respect of a Lift Irrigation Scheme at Kalgi and for new Tank at Arnakal in Taluk Chitapur, District Gulbarga ?